ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾಯಿಕ ದಂಡಾಧಿಕಾರಿಗಳರವರ ನ್ಯಾಯಾಲಯ,
ಹೆಚ್.ಡಿ.ಕೋಟೆ

**ಸಿ.ಸಿ. ನಂ. 567/2019**

ಸಾಕ್ಷಿಗೆ ದಿನಾಂಕಃ **25.7.2022** ರಂದು ಪ್ರಮಾಣವಚನ ಬೋಧಿಸಲಾಯಿತು.

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಮುತ್ತಮ್ಮ | ಪಿ.ಡಬ್ಲ್ಯೂ-5 |
| ತಂದೆಯ/ಗಂಡನ ಹೆಸರು | : | ಲಿಂಗರಾಜು | ಸಿ.ಡಬ್ಲ್ಯೂ-10 |
| ವಯಸ್ಸು | : | 42 | |
| ಉದ್ಯೋಗ | : | ವ್ಯವಸಾಯ | |
| ವಾಸಸ್ಥಳ | : | ಕೋಹಳ | |

ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ

ಮೃತ ನಾಗರಾಜು ನನ್ನ ಮಗ. ಚಾಸ 1 ನನ್ನ ಗಂಡ. ಸುಮಾರು 4 ವರ್ಷದ ಹಿಂದೆ ನನ್ನ ಮಗನಿಗೆ ಜ್ವರ ಬಂದಿರುತ್ತದೆ. ಆತನನ್ನು ಹಂಪಾಪುರದಲ್ಲಿರುವ ಆರೋಪಿಯ ಕ್ಲಿನಿಕ್‌ಗೆ ಕರೆದುಕೊಂಡು ಹೋಗಿ ಚಿಕಿತ್ಸೆ ಕೊಡಿಸಿರುತ್ತೇನೆ. ಆಗ ಅವರು ಇಂಜಕ್ಷನ್ ನೀಡಿರುತ್ತಾರೆ. ಮರುದಿನ ಆತನಿಗೆ ಇಂಜಕ್ಷನ್ ಮಾಡಿದ ಜಾಗದಲ್ಲಿ ಊತ ಬಂದಿರುತ್ತದೆ. ಆ ಕಾರಣ ಪುನಃ ಆರೋಪಿ ಬಳಿ ಚಿಕಿತ್ಸೆಗೆ ಕರೆದುಕೊಂಡು ಹೋದಾಗ ಆತ ಕುಂಡಿಗೆ ಬಿಸಿ ಶಾಖ ನೀಡಿ, 2 ಮಾತ್ರೆಗಳನ್ನು ನೀಡಿರುತ್ತಾರೆ. ನನ್ನ ಮಗನ ಕುಂಡಿಗೆ ಇನಪೆಕ್ಷನ್ ಆಗಿ ಕೀವು ಬರುತ್ತಿತ್ತು. ಆ ಕಾರಣ ಪುನಃ ಆರೋಪಿ ಬಳಿ ಕರೆದುಕೊಂಡು ಹೋದಾಗ, ಆತ ನನ್ನ ಮಗನನ್ನು ಪರೀಕ್ಷಿಸದೇ ಮೈಸೂರಿಗೆ ಕರೆದುಕೊಂಡು ಹೋಗಲು ತಿಳಿಸಿರುತ್ತಾನೆ. ಮೈಸೂರಿನ ಕೆ.ಆರ್.ಅಸ್ಪತ್ರೆಗೆ ಕರೆದುಕೊಂಡು ಹೋದಾಗ ಅವರು ನನ್ನ ಮಗನನ್ನು ಪರೀಕ್ಷಿಸಿ ಆತ ಬದುಕುವುದು ಕಷ್ಟ ಎಂದು ಹೇಳಿರುತ್ತಾರೆ. ಆ ಕಾರಣ ನನ್ನ ಮಗನನ್ನು ಮೈಸೂರಿನ ಜೆ.ಎಸ್.ಎಸ್ ಆಸ್ಪತ್ರೆಗೆ ದಾಖಲು ಮಾಡಿರುತ್ತೇವೆ. ಆದರೆ ಚಿಕಿತ್ಸೆ ಫಲಕಾರಿಯಾಗದೇ ನನ್ನ ಮಗ ಮೃತಪಟ್ಟಿರುತ್ತಾನೆ. ನನ್ನ ಮಗ ಮೃತಪಟ್ಟ ವಿಚಾರವನ್ನು ಆರೋಪಿಗೆ ಹೇಳಿದಾಗ, ಪರಿಹಾರವಾಗಿ 10 ಲಕ್ಷ ನೀಡುವುದಾಗಿ ತಿಳಿಸಿರುತ್ತಾನೆ. ಆ ಕಾರಣ ನನ್ನ ಮಗನನ್ನು ದಪನ್ ಮಾಡಿರುತ್ತೇವೆ. ಸ್ವಲ್ಪ ದಿನಗಳ ನಂತರ ಆರೋಪಿ ಬಳಿ ಹೋಗಿ ಪರಿಹಾರದ ಹಣ ಕೇಳಲಾಗಿ ಆತ ನೀಡುವುದಿಲ್ಲ ಎಂದು ತಿಳಿಸಿರುತ್ತಾನೆ. ಹಣ ನೀಡಲಾಗುವುದಿಲ್ಲ ಎಂದು ಒಂದು ಮನೆಯನ್ನು ನನ್ನ ಮೈದನ ಹೆಸರಿಗೆ ಕರಾರು ಮಾಡಿರುತ್ತಾನೆ. ಸದರಿ ಮನೆಯನ್ನು ಸಹ ಆರೋಪಿ ನಮಗೆ ನೀಡಿರುವುದಿಲ್ಲ, ಆ ಕಾರಣ ನನ್ನ ಗಂಡ ಪೋಲಿಸರಿಗೆ ದೂರು ನೀಡಿರುತ್ತಾರೆ. ಪೋಲಿಸರು ನನ್ನ ಮಗನ ಮೃತದೇಹವನ್ನು ಪುನಃ ಹೊರತೆಗೆದು ಶವ ತನಿಖೆ ಮಾಡಿಸಿರುತ್ತಾರೆ. ಆರೋಪಿ ನೋಡಿದರೆ ಗುರುತಿಸುತ್ತೇನೆ, ಈ ದಿನ ನ್ಯಾಯಾಲಯದ ಮುಂದೆ ಇರುತ್ತಾನೆ.

(ಎಪಿಪಿಯವರು ಸಾಕ್ಷಿಯನ್ನು ಭಾಗಾಂಶ ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಲು ಅನುಮತಿ ಕೋರಿದ್ದರಿಂದ ಅನುಮತಿಯನ್ನು ನೀಡಲಾಯಿತು.)

ಪಾಟೀಸವಾಲುಃಎಪಿಪಿ ರವರಿಂದಃ

ಆರೋಪಿ ವೈದ್ಯನಾಗಿರುವುದಿಲ್ಲ ಮತ್ತು ಆತನ ನಿರ್ಲಕ್ಷತೆಯಿಂದ ನನ್ನ ಮಗ ಮೃತಪಟ್ಟಿರುತ್ತಾನೆ ಎಂದರೆ ಸರಿ. ಆರೋಪಿ ಪರಿಹಾರ ನೀಡುತ್ತೇನೆ ಎಂದು ಹೇಳಿ 5 ತಿಂಗಳ ಸಮಯ ಪಡೆದುಕೊಂಡು ಸಾಕ್ಷ್ಯ ನಾಶಪಡಿಸಿರುತ್ತಾನೆ ಎಂದರೆ ಸರಿ.

ಪಾಟೀ ಸವಾಲು ಃ ಆರೋಪಿ ಪರ ವಕೀಲರಿಂದ

ಸಾಮಾನ್ಯವಾಗಿ ಕ್ಲಿನಿಕ್ ಗೆ ಅನೇಕ ರೋಗಿಗಳು ಬರುತ್ತಾರೆ ಎಂದರೆ ಸರಿ. ಮೊದಲನೇ ದಿನ ನನ್ನ ಮಗನನ್ನು ನನ್ನ ಗಂಡ ಆರೋಪಿ ಬಳಿ ಚಿಕಿತ್ಸೆಗೆ ಕರೆದುಕೊಂಡು ಹೋಗಿರುತ್ತಾನೆ. ನಾನು ಆರೋಪಿ ಕ್ಲಿನಿಕ್‌ಗೆ ಮೊದಲ ಬಾರಿ ಹೋಗಿರುವುದಿಲ್ಲ ಎಂದರೆ ಸರಿ. ನನ್ನ ಗಂಡ ಮತ್ತು ಮಗ ಆರೋಪಿ ಕುಂಡಿಗೆ ಇಂಜಕ್ಷನ್ ನೀಡಿರುವುದಾಗಿ ತಿಳಿಸಿರುತ್ತಾರೆ. ಸಾಮಾನ್ಯವಾಗಿ ಕ್ಲಿನಿಕ್ ನಲ್ಲಿ ನಾಮಫಲಕ ಇರುತ್ತದೆ ಎಂದರೆ ಸರಿ. ಆದರೆ ಆರೋಪಿ ಕ್ಲಿನಿಕ್ ಗೆ ನಾಮಫಲಕ ಇರುವುದಿಲ್ಲ. ಸಾಮಾನ್ಯವಾಗಿ ವೈದ್ಯರು ರೋಗಿಯನ್ನು ಪರೀಕ್ಷೆ ಮಾಡಿದ ನಂತರ ಔಷದಿ ಚೀಟಿಯನ್ನು ಬರೆದುಕೊಡುತ್ತಾರೆ ಎಂದರೆ ಸರಿ. ಆರೋಪಿ ನಮಗೆ ಯಾವುದೇ ಚೀಟಿಯನ್ನು ಬರೆದುಕೊಟ್ಟಿರುವುದಿಲ್ಲ. ರೋಗಿ ಪರೀಕ್ಷಿಸಲು ಕ್ಲಿನಿಕನಲ್ಲಿ ಬೇರೆ ಕೊಠಡಿ ಇರುತ್ತದೆ ಎಂದರೆ ಸರಿ. ನಾನು ಅಸ್ಪತ್ರೆಗೆ ಹೋದಾಗ ನನ್ನ ಮಗ ಹೊರತುಪಡಿಸಿ ಬೇರೆ ರೋಗಿಗಳು ಇರಲಿಲ್ಲ. ಆರೋಪಿ ಹೊರತುಪಡಿಸಿ ಆ ದಿನ ಕ್ಲಿನಿಕ್ ನಲ್ಲಿ ಬೇರೆ ಯಾರು ಇರಲಿಲ್ಲ. ಆರೋಪಿ ನನ್ನ ಮಗನಿಗೆ ಯಾವುದೇ ಇಂಜಕ್ಷನ್ ಅಥವಾ ಮಾತ್ರೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಹಂಪಾಪುರದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ ಇರುತ್ತದೆ ಎಂದರೆ ಸರಿ. ಸದರಿ ಅಸ್ಪತ್ರೆ 24*7 ರಂತೆ ಸೇವೆ ಸಲ್ಲಿಸುತ್ತದೆ ಎಂದರೆ ಸರಿ. ಸದರಿ ನನ್ನ ಮಗನನ್ನು ಕ್ಲಿನಿಕ್ ಗೆ ಕರೆದುಕೊಂಡು ಹೋಗಿರುವುದಿಲ್ಲ ಮತ್ತು ಯಾವುದೇ ಚಿಕಿತ್ಸೆ ಕೊಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಮಗನನ್ನು ಕೆ.ಆರ್.ಆಸ್ಪತ್ರೆ ಅಥವಾ ಜೆ.ಎಸ್.ಎಸ್. ಆಸ್ಪತ್ರೆಗೆ ಚಿಕಿತ್ಸೆಗೆ ಕರೆದುಕೊಂಡು ಹೋಗಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿ ನನ್ನ ಮೈದನ ಹೆಸರಿಗೆ ಯಾವುದೇ ಕರಾರುಪತ್ರ ಬರೆದುಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಕರಾರುಪತ್ರವನ್ನು ಪೋಲಿಸರಿಗೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿ ವಿರುದ್ಧ ಏಕೆ ಮೊದಲೇ ದೂರು ನೀಡಲಿಲ್ಲ ಎಂದರೆ, ಆರೋಪಿ ತೀರ್ಮಾನ ಮಾಡಿಕೊಳ್ಳುವುದಾಗಿ ತಿಳಿಸಿರುತ್ತಾನೆ, ಆ ಕಾರಣ ತಕ್ಷಣ ದೂರು ನೀಡಿರುವುದಿಲ್ಲ. ರಾಜಿ ಮಾಡಿಕೊಳ್ಳುವ ಬಗ್ಗೆ ಪಂಚಾಯಿತಿ ನಡೆದಿರುತ್ತದೆ. ಅದಕ್ಕೆ ನಾನು ಹೋಗಿರುವುದಿಲ್ಲ, ಆದರೆ ನನ್ನ ಗಂಡ ಹಾಗೂ ಮೈದ ಹೋಗಿರುತ್ತಾರೆ. ಬೇರೆ ಯಾರು ಪಂಚಾಯಿತಿಯಲ್ಲಿ ಭಾಗಿಯಾಗಿದ್ದರು ಎಂದು ನನಗೆ ಗೊತ್ತಿರುವುದಿಲ್ಲ. ಪಂಚಾಯಿತಿಯಲ್ಲಿ ಆರೋಪಿ 2 ಲಕ್ಷ ನೀಡುವುದಾಗಿ ತಿಳಿಸಿರುತ್ತಾನೆ, ಅದಕ್ಕೆ ನನ್ನ ಗಂಡ ಒಪ್ಪಿ ರುವುದಿಲ್ಲ. ನನ್ನ ಮಗನಿಗೆ ಆರೋಪಿ ಯಾವುದೇ ಚಿಕಿತ್ಸೆ ನೀಡಿರುವುದಿಲ್ಲ ಹಾಗೂ ಸಾವಿಗೆ ಆತನು ಕಾರಣವಾಗಿರುವುದಿಲ್ಲ ಎಂದರೆ ಸರಿಯಲ್ಲ. ಜೆ.ಎಸ್.ಎಸ್. ಆಸ್ಪತ್ರೆ ವೈದ್ಯರು ನನ್ನ ಮಗನ ಸಾವಿಗೆ ಹೃದಯ ಸಂಬಂಧಿ ಕಾಯಿಲೆ ಎಂದು ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿಯಿಂದ ಅಕ್ರಮ ಲಾಭ ಪಡೆಯುವ ಸಲುವಾಗಿ ಈ ಸುಳ್ಳು ದೂರು ನೀಡಿರುತ್ತೇವೆ ಎಂದರೆ ಸರಿಯಲ್ಲ.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸಾ ಸ ಇ ಒ.,

ಹಿರಿಯ ಸಿ.ಜೆ ಮತ್ತು ಜೆ.ಎಂ.ಎಫ್.ಸಿ.,
ಹೆಚ್.ಡಿ.ಕೋಟೆ